# ರಾಮಕೃಷ್ಣ–ವಿವೇಕಾನಂದ ವೇದಾಂತ ಚಳುವಳಿಯಲ್ಲಿ ಪತ್ರಿಕೆಗಳ ಮಹತ್ವ

**ವಿರಾಜ್ ಮಂಗಲಗಿ**

ಶ್ರೀರಾಮಕೃಷ್ಣ ಭಾವಧಾರೆ ಹಾಗೂ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯದಲ್ಲಿ ಪ್ರಧಾನ ಪಾತ್ರ ವಹಿಸುವ ಮಾಧ್ಯಮವೇ ಪತ್ರಿಕೆಗಳು. ಸ್ವಾಮಿ ವಿವೇಕಾನಂದರ ಪ್ರೇರಣೆಯಂತೆ ರಾಮಕೃಷ್ಣ ಮಹಾಸಂಘದ ಕೇಂದ್ರಗಳು ನಡೆಸುತ್ತಿರುವ ವಿವಿಧ ಭಾಷೆಗಳ ಪತ್ರಿಕೆಗಳ ಹಿನ್ನೆಲೆ ಹಾಗೂ ಸಂಕ್ಷಿಪ್ತ ಇತಿಹಾಸವನ್ನಿಲ್ಲಿ ನೀಡಲಾಗಿದೆ. ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ, ಕೆಲವು ಗ್ರಂಥಗಳ ಲೇಖಕರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಗುರುಭಾಯಿಗಳಾದ ಸ್ವಾಮಿ ತುರೀಯಾನಂದರಿಗೆ ಹೇಳಿದರು; ''ನಾನೊಂದು ಹೊಸ ಮಾದರಿಯ ಸಂನ್ಯಾಸಿಗಳ ಸಂಘವನ್ನು ನಿರ್ಮಾಣ ಮಾಡುವವನಿದ್ದೇನೆ. ಈ ದಿಸೆಯಲ್ಲಿ ನಾನೊಂದು ಕ್ರಾಂತಿಯನ್ನೇ ಎಬ್ಬಿಸಲಿದ್ದೇನೆ'' ಎಂದು.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಶಿಷ್ಯರೆಲ್ಲ ಭಾರತದಾದ್ಯಂತ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ಪ್ರಾಚೀನ ಕಾಲದ ಋಷಿಗಳಂತೆ ತಪಸ್ಸಿನಲ್ಲಿ ತಮ್ಮನ್ನು ತಾವು ಪೂರ್ತಿಯಾಗಿ ತೊಡಗಿಸಿಕೊಂಡರು. ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಲ್ಲಿ ವೇದಾಂತದ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಭಾರತಕ್ಕೆ ಮರಳಿದರು. ಕಲ್ಕತ್ತದ ಶ್ರೀರಾಮಕೃಷ್ಣರ ಗೃಹೀಭಕ್ತನಾದ ಬಲರಾಮ ಬೋಸನ ಮನೆಯಲ್ಲಿ ಭಕ್ತರ ಹಾಗೂ ಸೋದರ ಸಂನ್ಯಾಸಿಗಳ ನೇತೃತ್ವದಲ್ಲಿ ೧೮೯೭ ಮೇ ೧ ರಂದು ''ರಾಮಕೃಷ್ಣ ಮಠ ಮತ್ತು ಮಿಷನ್'' ಎಂಬ ಹೆಸರಿನಲ್ಲಿ ಮಹಾಸಂಘವನ್ನು ಸಂಸ್ಥಾಪಿಸಿದರು. ''ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'' ಎಂಬುದು ಮಹಾಸಂಘದ ಧ್ಯೇಯವಾಕ್ಯವಾಯಿತು. ಅಂದರೆ ಸ್ವಂತ ಮುಕ್ತಿ ಹಾಗೂ ಲೋಕಹಿತ ಕಾರ್ಯಕ್ಕಾಗಿ ಶ್ರಮಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಯಿತು.

ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಲ್ಲಿದ್ದಾಗಲೇ ಅತ್ಯಂತ ಸ್ಫೂರ್ತಿಯುತವಾದ ನೂತನ ಚಿಂತನ ಧಾರೆಯನ್ನೊಳಗೊಂಡ ಪತ್ರಗಳನ್ನು ಬರೆಯುತ್ತ ತಮ್ಮ ಗುರುಭಾಯಿಗಳಿಗೆ 'ತ್ಯಾಗ ಮತ್ತು ಸೇವೆಯ' ಮಹಾನ್ ಆದರ್ಶವನ್ನು ಪರಿಚಯಿಸಿ ಕಾರ್ಯೋನ್ಮುಖರಾಗುವಂತೆ ಉತ್ತೇಜಿಸುತ್ತಿದ್ದರು. ಸ್ವಾಮೀಜಿಯವರ ಅನೇಕ ಸೇವಾಕಾರ್ಯಗಳಲ್ಲಿ ಮಾಸಪತ್ರಿಕೆ ಇಲ್ಲವೆ ನಿಯತಕಾಲಿಕೆಯ ಮೂಲಕ ಶ್ರೇಷ್ಠವಾದ ಆಧ್ಯಾತ್ಮಿಕ ತತ್ತ್ವಗಳು ಜನಸಾಮಾನ್ಯರಿಗೂ ತಲುಪುವಂತಾಗಬೇಕು ಎಂಬುದೂ ಒಂದಾಗಿತ್ತು.

ಭಾರತೀಯ ಸಂಸ್ಕೃತಿ ಮತ್ತು ಶ್ರೀರಾಮಕೃಷ್ಣರ ಜೀವನ–ಸಂದೇಶಗಳನ್ನು ಜನಮನಗಳಲ್ಲಿ ಬಿತ್ತರಿಸುವಲ್ಲಿ ಪತ್ರಿಕೆಯು ಪ್ರಮುಖವಾದ ಪಾತ್ರ ವಹಿಸುತ್ತದೆ ಎಂಬುದು ಸ್ವಾಮೀಜಿಯವರ ಸ್ಪಷ್ಟವಾದ ನಿಲುವಾಗಿತ್ತು . ಅದರಲ್ಲಿ ೨ ಇಂಗ್ಲಿಷ್ ಪತ್ರಿಕೆಗಳು, ೧ ಬಂಗಾಳೀ ಪತ್ರಿಕೆ ಪ್ರಾರಂಭಿಸುವುದಾಗಿ ಹೇಳಿದರು. 'ಬ್ರಹ್ಮವಾದಿನ್' ಮತ್ತು 'ಪ್ರಬುದ್ಧ ಭಾರತ' ಇಂಗ್ಲೀಷ್ ಪತ್ರಿಕೆಗಳು ಕ್ರಮಗತವಾಗಿ ೧೮೯೫ ಮತ್ತು ೧೮೯೬ರಲ್ಲಿ ಪ್ರಾರಂಭವಾಗಿದ್ದವು. ಬಂಗಾಳೀ ಭಾಷೆಯಲ್ಲಿ 'ಉದ್ಬೋಧನ' ಪತ್ರಿಕೆಯ ಆಲೋಚನೆಯನ್ನು ತಮ್ಮ ಸೋದರ ಸಂನ್ಯಾಸಿಗಳ ಮುಂದಿಟ್ಟಾಗ ಸ್ವಾಮಿ ತ್ರಿಗುಣಾತೀತಾನಂದರು ಅದಕ್ಕೆ ಸಹಜವಾಗಿ ಪ್ರತಿಕ್ರಿಯಿಸಿದರು. 'ಉದ್ಬೋಧನ' ಪತ್ರಿಕೆಯು ೧೮೯೯ರಲ್ಲಿ ಆರಂಭವಾಯಿತು. ಈ ೩ ಪತ್ರಿಕೆಗಳ ಆರಂಭ, ಬೆಳವಣಿಗೆ ಹಾಗೂ ಅದರ ಪರಾಕಾಷ್ಠೆಯ ಕುರಿತಾಗಿ ಆಲೋಚಿಸೋಣ.

### ೧. 'ಬ್ರಹ್ಮವಾದಿನ್' ಪತ್ರಿಕೆ

ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ವೇದಾಂತವನ್ನು ಪ್ರಚಾರಮಾಡುತ್ತಲೇ ಭಾರತದಲ್ಲಿ ಸಾಧಿಸಿದ ಪ್ರಮುಖವಾದ ಕಾರ್ಯವೆಂದರೆ, ಅದು 'ಬ್ರಹ್ಮವಾದಿನ್' ಪತ್ರಿಕೆಯನ್ನು ಪ್ರಾರಂಭ ಮಾಡಿದ್ದು. ಭಾರತದ ಪುನರ್‌ಜಾಗೃತಿಯ ಹಾಗೂ ಧರ್ಮ ಪ್ರಸಾರದ ಕಾರ್ಯಪ್ರಣಾಳಿಕೆಯಲ್ಲಿ ನಿಯತಕಾಲಿಕ ಪತ್ರಿಕೆಯೊಂದು ಎಷ್ಟು ಮಹತ್ವಪೂರ್ಣವಾದ ಪಾತ್ರವಹಿಸುತ್ತದೆ ಎಂಬುದನ್ನು ಸ್ವಾಮೀಜಿ ಮುಂಚೆಯೇ ಕಂಡುಕೊಂಡಿದ್ದರು. ಮದ್ರಾಸಿನ ಶಿಷ್ಯರಿಗೆ ಸೂಕ್ತವಾದ ಮಾರ್ಗದರ್ಶನದೊಂದಿಗೆ ಪತ್ರಿಕೆಗಳ ಮೂಲಕ ಕರ್ಮಕ್ಷೇತ್ರಕ್ಕಿಳಿಯುವಂತೆ ಪ್ರೋತ್ಸಾಹಿಸಿದರು. ಅದರಲ್ಲೂ ಸ್ವಾಮೀಜಿಯವರ ಶಿಷ್ಯೋತ್ತಮನಾದ ಅಳಸಿಂಗ ಪೆರುಮಾಳ್ ಅವರಿಗೆ ಪತ್ರಗಳ ಮೇಲೆ ಪತ್ರಗಳನ್ನು ಬರೆಯುತ್ತಿದ್ದರು. ಪತ್ರಿಕೆ ಪ್ರಾರಂಭಮಾಡುವುದಕ್ಕೆ ಹಣವನ್ನೂ ಕಳುಹಿಸಿದರು. ಅಳಸಿಂಗರಿಗೆ ಆ ಪತ್ರಗಳು ಗುರೂಪದೇಶವಾಯಿತು. ಹಲವಾರು ಸಲ ಆ ಪತ್ರಗಳನ್ನು ತಾವೂ ಓದುತ್ತ ತಮ್ಮ ಯುವಮಿತ್ರರಿಗೂ ತೋರಿಸುತ್ತ ಉತ್ಸಾಹಭರಿತರಾಗಿ ಕಾರ್ಯತತ್ಪರರಾದರು. ಅಳಸಿಂಗರ ನಾಯಕತ್ವದಲ್ಲಿ ಪತ್ರಿಕೆಯ ಕೆಲಸ ಪ್ರಾರಂಭವಾಯಿತು.


ಸ್ವಾಮೀಜಿಯವರು ಅಮೆರಿಕಾದಲ್ಲಿ ನಿರಂತರವಾಗಿ ಮಾಡುತ್ತಿದ್ದ ಉಪನ್ಯಾಸಗಳನ್ನೂ; ಹಿಂದೂಧರ್ಮ, ಭಾರತದ ಭವ್ಯವಾದ ಸಂಸ್ಕೃತಿ ಮತ್ತು ಪರಂಪರೆ ಮುಂತಾದ ವಿಷಯಗಳ ಕುರಿತು ಬರೆಯುತ್ತಿದ್ದ ಲೇಖನಗಳನ್ನೂ ಪ್ರಚುರಪಡಿಸಲು ಅಳಸಿಂಗರು ಉತ್ಸಾಹಿತರಾದರು. ಆಂಗ್ಲ ಮಾದರಿಯ ಶಿಕ್ಷಣವನ್ನು ಪಡೆದು ಪಾಶ್ಚಾತ್ಯ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದ ಯುವ ಸಮೂಹಕ್ಕೆ ಭಾರತದ ಧರ್ಮ-ಆಧ್ಯಾತ್ಮಿಕತೆಯ ಔನ್ನತ್ಯ ವನ್ನು ಪರಿಚಯ ಮಾಡಿಕೊಡುತ್ತ, ಅವರಲ್ಲಿ ಧರ್ಮ ಶ್ರದ್ಧೆಯ ಜೊತೆಗೆ ರಾಷ್ಟ್ರಾಭಿಮಾನವನ್ನೂ ಜಾಗೃತಗೊಳಿಸಿ ಅವರನ್ನೆಲ್ಲ ದೇಶದ ಬಹುಮುಖ ಸೇವೆಗೆ ಕಂಕಣಬದ್ಧರನ್ನಾಗಿಸಲು ಆಂಗ್ಲ ಭಾಷೆಯಲ್ಲೇ ಒಂದು ಪತ್ರಿಕೆಯನ್ನು ಹೊರಡಿಸುವ ಆವಶ್ಯಕತೆ ಯನ್ನು ಅಳಸಿಂಗರು ಕಂಡುಕೊಂಡರು. ಪತ್ರಿಕೆಯಲ್ಲಿ ಶ್ರೀರಾಮಕೃಷ್ಣರ ಹಾಗೂ ಇತರ ಸಂತ-ಮಹಾತ್ಮರ ಜೀವನ-ಸಂದೇಶಗಳು; ಭಗವ ದ್ಗೀತೆ, ಉಪನಿಷತ್ತುಗಳ ಜೊತೆಗೆ ಇನ್ನಿತರ ಆಧ್ಯಾತ್ಮಿಕ ಗ್ರಂಥಗಳ ಸಾರವನ್ನೂ ಪ್ರಚುರಪಡಿಸುವುದೆಂದು ಸಂಕಲ್ಪಿಸಲಾಯಿತು.

ಸ್ವಾಮೀಜಿಯವರ ಸ್ಫೂರ್ತಿದಾಯಕ ಪತ್ರಗಳನ್ನೋದಿ ಮೊದಲೇ ಉತ್ಸಾಹಿತರಾದ ಅಳಸಿಂಗರು, ತಮ್ಮ ಈ ಮಹೋನ್ನತವಾದ ಉದ್ದೇಶವನ್ನು ತಿಳಿಸಿದಾಗ ಸ್ವಾಮೀಜಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ ಕೆಲವು ಅಮೂಲ್ಯವಾದ ಸಲಹೆ-ಸಹಕಾರವನ್ನು ನೀಡಿದರು.

ಅಳಸಿಂಗರ ಮುಂದಾಳತ್ವದಲ್ಲಿ ಬ್ರಹ್ಮವಾದಿನ್ ಪತ್ರಿಕೆಯು ೧೮೯೫ ಸೆಪ್ಟೆಂಬರ್ ೧೪ರಂದು ಅಸ್ತಿತ್ವಕ್ಕೆ ಬಂದಿತು. ಆ ಪತ್ರಿಕೆಯನ್ನು ಪ್ರಶಂಸಿಸುತ್ತ ಸ್ವಾಮಿ ವಿವೇಕಾನಂದರು ಬರೆಯುತ್ತಾರೆ: ''ಬ್ರಹ್ಮವಾದಿನ್ ಪತ್ರಿಕೆಯ ಯಶಸ್ಸೇ ನಿನ್ನ ಮುಕ್ತಿಗಿರುವ ಏಕೈಕ ಮಾರ್ಗವೆಂದು ತಿಳಿದು ಕೆಲಸ ಮಾಡು. ಈ ಗುರಿಯತ್ತ ನಿನಗೆ ಸಂಪೂರ್ಣ ಶ್ರದ್ಧೆಯಿರಲಿ. ಈ ಪತ್ರಿಕೆಯೇ ನಿನ್ನ ಇಷ್ಟದೇವತೆಯಾಗಲಿ. ಆಗ ನಿನ್ನ ಧ್ಯೇಯ ಹೇಗೆ ಸಿದ್ಧಿಸುತ್ತದೆ ಎಂಬುದು ನಿನಗೆ ಸ್ಪಷ್ಟವಾಗುತ್ತದೆ.'' ಈ ಗುರುವಾಕ್ಯವನ್ನು ಅಳಸಿಂಗರು ಶ್ರದ್ಧಾಭಕ್ತಿಯಿಂದ ಅನುಸರಿಸಿ ನಡೆದರು.

ಬ್ರಹ್ಮವಾದಿನ್ ಪತ್ರಿಕೆಯ ಕೆಲಸ-ಕಾರ್ಯಗಳೇ ಅಳಸಿಂಗರ ತಪಸ್ಸಾಯಿತು. ಪ್ರಸಿದ್ಧ ಬರಹಗಾರರ ವಿದ್ವಾಂಸರ ಲೇಖನಗಳನ್ನು ಸಂಗ್ರಹಿಸಿ ಸಂಪಾದನೆ ಮಾಡುತ್ತಿದ್ದರು. ಕರಡಚ್ಚು ತಿದ್ದುಪಡಿಸಿ ಮುದ್ರಣಕ್ಕೆ ಕಳುಹಿಸುತ್ತಿದ್ದರು. ಅನಂತರ ಪತ್ರಿಕೆಗಳನ್ನೆಲ್ಲ ಜೋಡಿಸಿ ಲೇಖಕರಿಗೂ ಚಂದಾದಾರರಿಗೂ ವಿಳಾಸ ಬರೆದು, ಸ್ಟ್ಯಾಂಪ್ ಅಂಟಿಸಿ, ಅಂಚೆ ಕಛೇರಿಗೆ ಕಳುಹಿಸುತ್ತಿದ್ದರು. ವಿದೇಶಗಳಲ್ಲಿಯೂ ಪತ್ರಿಕೆ ಚಂದಾದಾರರು ಹೆಚ್ಚಾಗಿರುವುದರಿಂದ ಪತ್ರಿಕೆಯನ್ನು ರಿಜಿಸ್ಟರ್ ಪೇಪರಾಗಿ ದಾಖಲೆ ಮಾಡಿಸಿದ್ದರು. ಕೆಲವೊಮ್ಮೆ ಮಧ್ಯರಾತ್ರಿಯವರೆಗೂ ಕೆಲಸ ನಿರಂತರವಾಗಿ ಸಾಗುತ್ತಿತ್ತು. ಹೀಗೆ ಸಿಂಹಪಾಲು ಕೆಲಸವನ್ನು ಅಳಸಿಂಗರೇ ಮಾಡುತ್ತಿದ್ದರು.

ಶಿಕ್ಷಕ ವೃತ್ತಿ, ಸಂಸಾರದ ನಿರ್ವಹಣೆ ಹಾಗೂ ಸ್ವಾಮೀಜಿಯವರ ವೇದಾಂತ ಸಂದೇಶಗಳ ಪ್ರಚಾರ ಕಾರ್ಯದ ಮಧ್ಯೆಯೂ ಅಳಸಿಂಗರು ಪತ್ರಿಕೆಯ ದಕ್ಷತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಯಶಸ್ವಿಯಾದರು. ಅಳಸಿಂಗರಿಗೆ ಗುರುವಿನಲ್ಲಿದ್ದ ಅಪಾರವಾದ ಶ್ರದ್ಧೆ, ಪ್ರಚಂಡವಾದ ಧೈರ್ಯ, ದಣಿವರಿಯದ





ಕಾರ್ಯೋತ್ಸಾಹ ಹಾಗೂ ತನುಮನಧನ ಸಮರ್ಪಣೆಯಿಂದಾಗಿ ಅಲ್ಪಾವಧಿಯಲ್ಲಿಯೇ ದೇಶ-ವಿದೇಶಗಳಲ್ಲಿ ಬ್ರಹ್ಮವಾದಿನ್ ಪತ್ರಿ ಕೆಯು ಪ್ರಸಿದ್ಧಿಯನ್ನು ಪಡೆಯಿತು.

ಅಳಸಿಂಗರು ಪತ್ರಿಕೆಯ ಪ್ರಾರಂಭದಿಂದ ತಮ್ಮ ಅಂತ್ಯದವರೆಗೆ ೧೪ ವರ್ಷಗಳ (೧೮೯೫-೧೯೦೯) ದೀರ್ಘಕಾಲ ಈ ಮಹತ್ವ ಪೂರ್ಣವಾದ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದರು. ಅಳಸಿಂಗರ ಮರಣಾನಂತರ 'ಬ್ರಹ್ಮವಾದಿನ್' ಪತ್ರಿಕೆಯು ೧೯೦೯ರಿಂದ ೧೯೧೪ರ ವರೆಗೆ ಎಂ.ಪಿ. ನರಸಿಂಹಾಚಾರ್ಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದು ಅನಂತರ ನಿಂತುಹೋಯಿತು. ಬ್ರಹ್ಮವಾದಿನ್ ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಮುನ್ನಡೆಸಿಕೊಂಡು ಹೋಗಲೆಂದೇ ಮದ್ರಾಸ್‌ನಲ್ಲಿ 'ವೇದಾಂತ ಕೇಸರಿ' ಪತ್ರಿಕೆಯು ಅತಿ ಶೀಘ್ರದಲ್ಲಿಯೇ ಪ್ರಾರಂಭವಾಯಿತು. ಇಂದಿಗೂ ರಾಮಕೃಷ್ಣ ಮಠ ಮದ್ರಾಸ್‌ದಿಂದ 'ವೇದಾಂತ ಕೇಸರಿ' ಪತ್ರಿಕೆಯು ಪ್ರಕಟವಾಗುತ್ತಿದ್ದು

ಅಸಂಖ್ಯ ಜನರಿಗೆ ಅದು ಸ್ಫೂರ್ತಿಯ ಸೆಲೆಯಾಗಿದೆ.

### ೨. 'ಪ್ರಬುದ್ಧ ಭಾರತ' ಪತ್ರಿಕೆ

ಸ್ವಾಮಿ ವಿವೇಕಾನಂದರು ವಿದೇಶದಲ್ಲಿದ್ದಾಗಲೇ 'ಬ್ರಹ್ಮವಾದಿನ್' ಪತ್ರಿಕೆಯ ಜೊತೆಗೆ 'ಪ್ರಬುದ್ಧ ಭಾರತ' ಎಂಬ ಆಂಗ್ಲ ಪತ್ರಿಕೆಯನ್ನು ಭಾರತದಲ್ಲಿ ಪ್ರಾರಂಭಮಾಡಿದರು. ಮದ್ರಾಸಿನಲ್ಲಿ ಅವರ ಶಿಷ್ಯರು ಅದಾಗಲೇ 'ಬ್ರಹ್ಮವಾದಿನ್' ಪಾಕ್ಷಿಕ ಪತ್ರಿಕೆಯ ಮೂಲಕ ವೇದಾಂತ ಪ್ರಚಾರ ಮಾಡುತ್ತಿದ್ದರು. ಬ್ರಹ್ಮವಾದಿನ್ ಪತ್ರಿಕೆಯಲ್ಲಿ ವಿದ್ವತ್ಪೂರ್ಣವಾದ ಲೇಖನಗಳು ಶ್ರೇಷ್ಠವಾದ ಧಾರ್ಮಿಕ ಹಾಗೂ ತಾತ್ವಿಕ ವಿಚಾರಗಳನ್ನೊಳಗೊಂಡು ಪ್ರೌಢ ಭಾಷೆಯಲ್ಲಿ ಪ್ರಕಟವಾಗುತ್ತಿದ್ದವು. ಇವುಗಳಲ್ಲಿ ಅನೇಕ ವಿಚಾರಗಳು ಜನಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ. ಆದ್ದರಿಂದ ಉನ್ನತ ವಿಚಾರಗಳನ್ನು ಪ್ರತಿಯೊಬ್ಬರಿಗೂ ಅರ್ಥವಾಗು




ವಂತೆ ಸರಳವಾದ ಭಾಷೆಯಲ್ಲಿ ತಿಳಿಸಿಕೊಡಲು 'ಪ್ರಬುದ್ಧ ಭಾರತ' ಪತ್ರಿಕೆಯನ್ನು ಪ್ರಾರಂಭಿಸಲಾಯಿತು. ಬೆಂಗಳೂರಿನ ಡಾ. ನಂಜುಂಡರಾವ್ ಈ ಕಾರ್ಯವನ್ನು ವಹಿಸಿಕೊಂಡರು. ಶ್ರೀ ಬಿ.ಆರ್. ರಾಜಂ ಅಯ್ಯರ್‌ರವರು ಪತ್ರಿಕೆಯ ಸಂಪಾದಕರಾದರು.


ಸ್ವಾಮೀಜಿಯವರು 'ಪ್ರಬುದ್ಧ ಭಾರತ' ಪತ್ರಿಕೆಯ ಸಮಸ್ತ ಕಾರ್ಯಕರ್ತರಿಗೂ ಹಾಗೂ ಸ್ವಯಂಸೇವಕರಿಗೂ ತಮ್ಮ ಹೃತ್ಪೂರ್ವಕವಾದ ಆಶೀರ್ವಾದಗಳನ್ನು ಪ್ರೋತ್ಸಾಹವನ್ನು ತಿಳಿಸಿದರು. ಡಾ. ನಂಜುಂಡರಾವ್‌ಗೆ ಬರೆದ ಪತ್ರದಲ್ಲಿ ಅವರು ಪತ್ರಿಕೆಯ ಬಗ್ಗೆ ಸೂಚನೆಗಳನ್ನು ಕೊಟ್ಟು ಕೊನೆಯಲ್ಲಿ ಬರೆಯುತ್ತಾರೆ; ''ಧೈರ್ಯವಾಗಿ ಮುಂದೆ ಸಾಗು. ಒಂದು ದಿನದಲ್ಲಿ ಅಥವಾ ಒಂದು ವರ್ಷದಲ್ಲಿ ಯಶಸ್ಸು ಬರುವುದೆಂದು ನಿರೀಕ್ಷಿಸಬೇಡ. ಯಾವಾಗಲೂ ಅತ್ಯಂತ ಶ್ರೇಷ್ಠವಾದುದನ್ನೇ ಆಶ್ರಯಿಸು. ನಿಶ್ಚಲನಾಗಿರು. ಅಸೂಯೆಯನ್ನು ಸ್ವಾರ್ಥವನ್ನು ದೂರವಿಟ್ಟಿರು. ಸತ್ಯದ, ಮಾನವತೆಯ ಹಾಗೂ ನಿನ್ನ ರಾಷ್ಟ್ರದ ಕುರಿತಾದ ಕಾರ್ಯಕ್ಕೆ ಎಂದೆಂದಿಗೂ ವಿಧೇಯನಾಗಿರು, ನಿಷ್ಠಾವಂತನಾಗಿರು. ಆಗ ನೀನು ಇಡೀ ಜಗತ್ತನ್ನೇ ಅಲುಗಾಡಿಸಬಲ್ಲೆ. ನೆನಪಿಟ್ಟುಕೊ — ಶಕ್ತಿಯ ಹಿಂದಿರುವ ರಹಸ್ಯವೆಂದರೆ ವ್ಯಕ್ತಿಯ ಶೀಲ, ಅವರ ಜೀವನ, ಮತ್ತೇನೂ ಅಲ್ಲ. ಈ ಪತ್ರವನ್ನು ತೆಗೆದಿಟ್ಟುಕೊಂಡಿರು. ಯಾವಾಗಲಾದರೂ ನಿನ್ನನ್ನು ಚಿಂತೆ ಆವರಿಸಿದರೆ ಇಲ್ಲವೆ ಮತ್ಸರವುಂಟಾದರೆ ಈ ಪತ್ರದ ಕಡೆಯ ಸಾಲುಗಳನ್ನು ಓದು. ಮಾತ್ಸರ್ಯವೇ ಗುಲಾಮರೆಲ್ಲರ ಬೇನೆ. ಅದೇ ನಮ್ಮ ರಾಷ್ಟ್ರಕ್ಕಂಟಿದ ಜಾಡ್ಯ. ಅದನ್ನು ಎಂದಿಗೂ ದೂರವಿಡು. ಸಕಲ ಯಶಸ್ಸೂ ನಿನ್ನದಾಗಲೆಂದು ಹಾರೈಸುತ್ತೇನೆ.''

'ಬ್ರಹ್ಮವಾದಿನ್' ಪತ್ರಿಕೆಯ ಮುದ್ರಣಾಲಯದಲ್ಲಿಯೇ 'ಪ್ರಬುದ್ಧ ಭಾರತ' ಪತ್ರಿಕೆಯು ಅಚ್ಚಾಗುತ್ತಿತ್ತು. ೧೮೯೬ರ ಜುಲೈನಲ್ಲಿ ಆರಂಭವಾದ ಈ ಪತ್ರಿಕೆಯು ಬಲು ಬೇಗ ಜನಪ್ರಿಯತೆಯನ್ನು ಗಳಿಸಿತು. ಇದರ ಮೊದಲ ಸಂಚಿಕೆಗಳನ್ನು ನೋಡಿದ ಸ್ವಾಮೀಜಿ ಸಂತಸವನ್ನು ವ್ಯಕ್ತಪಡಿಸಿ ಅದರ ಸುಧಾರಣೆಗೆ ಅನೇಕ ಸಲಹೆಗಳನ್ನು ನೀಡಿದರು. ಆ ಕಾಲದಲ್ಲಿಯೇ 'ಪ್ರಬುದ್ಧ ಭಾರತ'ಕ್ಕೆ ೩ ಸಾವಿರಕ್ಕೂ ಹೆಚ್ಚು ಚಂದಾದಾರರಾಗಿದ್ದರು. ಆದರೆ ೧೮೯೮ ಮೇ ತಿಂಗಳಲ್ಲಿ ಶ್ರೀ ರಾಜಂ ಅಯ್ಯರ್ ಅವರ ಆಕಸ್ಮಿಕ ಮರಣದಿಂದ ಪತ್ರಿಕೆಯು ನಿಂತು ಹೋಯಿತು. ಸ್ವಾಮೀಜಿಯವರ ನಿರಂತರವಾದ ಪರಿಶ್ರಮ ಹಾಗೂ ಪ್ರಚಂಡವಾದ ಇಚ್ಛಾಶಕ್ತಿಯಿಂದ ಪತ್ರಿಕೆಯು ಆಲ್ಮೋರಕ್ಕೆ ವರ್ಗಾಯಿಸಲ್ಪಟ್ಟು ೩ ತಿಂಗಳ ಅಲ್ಪಾವಧಿಯಲ್ಲೇ, ೧೮೯೮ ಆಗಸ್ಟ್‌ನಲ್ಲಿ ಪುನಃ ಪ್ರಕಟಣೆಗೊಂಡಿತು. ಈಗಲೂ ಹಿಮಾಲಯದ ಪ್ರದೇಶದಲ್ಲಿರುವ ಮಾಯಾವತಿಯ ಅದ್ವೈತ ಆಶ್ರಮದಿಂದ ಪ್ರಕಟಣೆಯಾಗುತ್ತಿರುವ 'ಪ್ರಬುದ್ಧ ಭಾರತ' ಪತ್ರಿಕೆಯು ರಾಮಕೃಷ್ಣ ಮಹಾಸಂಘದ ಅತಿಮುಖ್ಯ ಪತ್ರಿಕೆಯಾಗಿದೆ.

### ೩) 'ಉದ್ಬೋಧನ' ಪತ್ರಿಕೆ

ಬಂಗಾಳಿ ಭಾಷೆಯಲ್ಲಿ 'ಉದ್ಬೋಧನ' ಪತ್ರಿಕೆಯ ಪೂರ್ಣ ಜವಾಬ್ದಾರಿಯನ್ನು ಸ್ವಾಮಿ ತ್ರಿಗುಣಾತೀತಾನಂದರು ವಹಿಸಿಕೊಂಡರು. 'ಉದ್ಬೋಧನ' ಪತ್ರಿಕೆಯಲ್ಲಿ ಯಾವ ಯಾವ ವಿಷಯಗಳು ಇರಬೇಕು ಎಂಬುದರ ಬಗ್ಗೆ ಸ್ವಾಮೀಜಿಯವರು ಸ್ಪಷ್ಟವಾಗಿ ನಿರ್ದೇಶನ ನೀಡಿದರು: ''ನಮ್ಮ ಜನತೆಯ ಶಾರೀರಿಕ, ಬೌದ್ಧಿಕ, ಆಧ್ಯಾತ್ಮಿಕ ಬೆಳವಣಿಗೆಗೆ ಸಂಬಂಧಪಟ್ಟ ರಚನಾತ್ಮಕ ವಿಷಯಗಳಲ್ಲದೆ ಇತರ ಯಾವ ವಿಷಯಗಳಿಗೂ ಇದರಲ್ಲಿ ಅವ

ಕಾಶವಿರಬಾರದು. ವಿವಿಧ ಮತಪಂಥಗಳ ಶಾಸ್ತ್ರಗಳು, ಸಾಹಿತ್ಯ, ತತ್ತ್ವ, ಕಾವ್ಯ, ಕಲೆಯೇ ಮೊದಲಾದವುಗಳಲ್ಲಿ ಪ್ರಣೀತವಾದ ಭಾವನೆಗಳಲ್ಲಿ ಹಾಗೂ ಸಾಧನೆಗಳಲ್ಲಿ ದೋಷ ಹುಡುಕಿ ಟೀಕಿಸುವುದರ ಬದಲು ಅವುಗಳ ಪ್ರಗತಿಗೆ ಸಹಾಯವಾಗುವಂತೆ ಏನು ಮಾಡಬಹುದು ಎಂಬುದನ್ನು ಪತ್ರಿಕೆ ತೋರಿಸಿ ಕೊಡಬೇಕು. ಈ ಪತ್ರಿಕೆಯು ಇತರರ ಭಾವನೆಗಳ ಮೇಲೆ ಆಕ್ರಮಣ ಮಾಡಲು ಹೋಗಬಾರದು. ವೇದವೇದಾಂತಗಳ ಅತ್ಯುನ್ನತ ತತ್ತ್ವಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಜನರಿಗೆ ತಿಳಿಸಿಕೊಡಬೇಕು. ಹೀಗೆ ನಮ್ಮ ಸಂಸ್ಕೃತಿ ಹಾಗೂ ಜ್ಞಾನ ರಾಶಿಯನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡುವುದರಿಂದಾಗಿ ಮುಂದೆ ಒಂದಲ್ಲ ಒಂದು ದಿನ ಚಂಡಾಲರನ್ನು ಬ್ರಾಹ್ಮಣರ ಮಟ್ಟಕ್ಕೆ ಏರಿಸಲು ಸಾಧ್ಯವಾಗಬಹುದು. ಈ 'ಉದ್ಬೋಧನ' ಪತ್ರಿಕೆಯು ಶ್ರೀರಾಮಕೃಷ್ಣರು ಬೋಧಿಸಿದ ಧರ್ಮ ಸಮನ್ವಯ ತತ್ತ್ವಗಳನ್ನು ಪ್ರತಿಪಾದಿಸಬೇಕು ಮತ್ತು ಅವರ ಪ್ರೀತಿ, ಪವಿತ್ರತೆ, ತ್ಯಾಗಗಳ ಆದರ್ಶವನ್ನು ಲೋಕದಾದ್ಯಂತ ಹರಡಬೇಕು.''




ಸ್ವಾಮೀಜಿಯವರ ಈ ಸ್ಪಷ್ಟವಾದ ಆದೇಶವನ್ನು ಮನಃಪೂರ್ವಕವಾಗಿ ಸ್ವೀಕರಿಸಿದ ಸ್ವಾಮಿ ತ್ರಿಗುಣಾತೀತಾನಂದರು ಕಾರ್ಯತತ್ಪರರಾದರು. ಸ್ವಾಮೀಜಿಯವರು ೧೦೦೦ ರೂಪಾಯಿಗಳನ್ನು ಆರಂಭ ಧನವಾಗಿ ನೀಡಿದರು. ಹರಮೋಹನ ಮಿತ್ರ ಎಂಬ ಓರ್ವ ಭಕ್ತನು ೧೦೦೦ ರೂಪಾಯಿಗಳನ್ನು ನೀಡಿದ್ದನು. ಆ ೨೦೦೦ ರೂಪಾಯಿಗಳಿಂದ ಮುದ್ರಣ ಯಂತ್ರವನ್ನು ಖರೀದಿಸಿ, ಕಲ್ಕತ್ತದ 'ಕೊಂಬೂಲಿಯಾ ತೋಲ' ಎಂಬ ಪ್ರದೇಶದಲ್ಲಿ ಎರಡು ಕೊಠಡಿಗಳನ್ನು ಬಾಡಿಗೆಗೆ ತೆಗೆದುಕೊಂಡು ಪತ್ರಿಕೆಯ ಕೆಲಸವನ್ನು ಪ್ರಾರಂಭಿಸಿಯೇ ಬಿಟ್ಟರು.

ಈ ನೂತನ ಕೆಲಸದ ಅನುಭವವಿಲ್ಲದಿದ್ದರೂ ಏಕಾಂಗಿಯಾಗಿ ಅತ್ಯಂತ ಪ್ರಾಮಾಣಿಕತೆ, ಸೋಲರಿಯದ ಛಲ, ಗುರು-ಗುರುಭಾಯಿಯ ಮೇಲಿದ್ದ ಅಚಲವಾದ ಶ್ರದ್ಧೆ ಹಾಗೂ ಆದರ್ಶದ ಬಗ್ಗೆ ಅವರಿಗಿದ್ದ ತೀವ್ರತಮವಾದ ಪ್ರೇಮದಿಂದಾಗಿ ಇಂತಹ ಮಹತ್ತರವಾದ ಜವಾಬ್ದಾರಿಯನ್ನು ಸ್ವಲ್ಪವೂ ಗೊಣಗುಟ್ಟದೆ ಸಮರ್ಥವಾಗಿ ನಿರ್ವಹಿಸತೊಡಗಿದರು. ಅವರೇ ಪತ್ರಿಕೆಯ ಸಂಪಾದಕರಾದರು. ಲೇಖಕರು, ಪ್ರಕಾಶಕರು, ಕರಡಚ್ಚು ತಿದ್ದುವವರು ಎಲ್ಲವೂ ಆಗಿದ್ದರು. ಕೆಲವು ಉತ್ತಮ ಬರಹಗಾರರಿಂದ ಲೇಖನಗಳನ್ನು ಸಂಗ್ರಹಿಸುವುದರ ಜೊತೆಗೆ, ಪತ್ರಿಕೆಗೆ ಚಂದಾದಾರರನ್ನು ಹುಡುಕಿಕೊಂಡು ಮನೆಯಿಂದ ಮನೆಗೆ ಅಲೆಯಬೇಕಾಗುತ್ತಿತ್ತು. ಹಣದ ಅಭಾವದಿಂದಾಗಿ ಟ್ರಾಮ್‌ನಲ್ಲಿ ಪ್ರಯಾಣಿಸದೆ ಪ್ರತಿನಿತ್ಯ ೧೦-೧೨ ಮೈಲಿ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು.

ಬೆಳಿಗ್ಗೆ ಮತ್ತು ರಾತ್ರಿ ಕೇವಲ ಕಡಲೆಪುರಿಯನ್ನು ತಿಂದು ಎಷ್ಟೋ ದಿನಗಳನ್ನು ಕಳೆದರು. ಪತ್ರಿಕೆಯ ಕೆಲಸವನ್ನು ರಾತ್ರಿಯಿಡೀ ಮಾಡುತ್ತ ಕೇವಲ ಒಂದು ಗಂಟೆ ಮಾತ್ರ ಮಲಗುತ್ತಿದ್ದರು. ರಾತ್ರಿ ನಿದ್ದೆ ಬರದಿರಲಿ ಎಂದು ಶುಚಿರ್ಭೂತರಾಗಿ ನಿಂತುಕೊಂಡೇ ಕರಡನ್ನು ನೋಡುತ್ತಿದ್ದರು. ಮುದ್ರಣಾಲಯದಲ್ಲಿ ಕೆಲಸದವರು ಅನಾರೋಗ್ಯಕ್ಕೆ ತುತ್ತಾದರೆ ಅತ್ಯಂತ ಪ್ರೀತಿಯಿಂದ ಅವರ ಶುಶ್ರೂಷೆ-ಸೇವೆ ಮಾಡುತ್ತಿದ್ದರು. ತಾವೇ ಜ್ವರ-ಕಾಯಿಲೆಯಿಂದ ಬಳಲುತ್ತಿದ್ದರೆ ಸ್ವಲ್ಪ ಹೊತ್ತು ಕಂಬಳಿ ಹೊದ್ದುಕೊಂಡು ಧ್ಯಾನಸ್ಥರಾಗಿ ಪುನಃ ಕೆಲಸವನ್ನು ಮುಂದುವರಿಸುತ್ತಿದ್ದರು. ಹೀಗೆ ಸ್ವಾಮಿ ತ್ರಿಗುಣಾತೀತಾನಂದರ ಅವಿಶ್ರಾಂತ ಪರಿಶ್ರಮದಿಂದ ೧೮೯೯ ಜನವರಿಯಲ್ಲಿ ಪತ್ರಿಕೆಯ ಮುದ್ರಣವಾಯಿತು.

ಸ್ವಾಮಿ ತ್ರಿಗುಣಾತೀತಾನಂದರು ಪತ್ರಿಕೆಯ ಒಂದು ಪ್ರತಿಯನ್ನು ತಮ್ಮ ನಾಯಕ ಹಾಗೂ ಪ್ರಾಣಕ್ಕೆ ಸಮನಾದ ಸ್ವಾಮಿ ವಿವೇಕಾನಂದರಿಗೆ ಅವರ ಶಿಷ್ಯನಾದ ಶರಚ್ಚಂದ್ರ ಚಕ್ರವರ್ತಿಯ ಮೂಲಕ ಕಳುಹಿಸಿದರು. ಸ್ವಾಮೀಜಿಯವರು ಪತ್ರಿಕೆಯ ಗುಣಮಟ್ಟವನ್ನು ಪ್ರಶಂಸಿಸುತ್ತ, ಕೆಲವು ಲೋಪದೋಷಗಳನ್ನು ತಿದ್ದಿ ಸರಿಪಡಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರು ಶರಚ್ಚಂದ್ರನಿಗೆ ಹೇಳುತ್ತಾರೆ; ''ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಕೇವಲ ಧುನಿ ಹಚ್ಚಿಕೊಂಡು ಮರದ ಕೆಳಗೆ ಕುಳಿತು ಧ್ಯಾನಮಾಡಲು ಜನ್ಮತಾಳಿದರೆಂದು ತಿಳಿದುಕೊಂಡಿರುವೆಯಾ? ಅವರಲ್ಲಿ ಯಾರು ಯಾವ ಕೆಲಸವನ್ನು ಕೈಗೆತ್ತಿಕೊಂಡರೂ ಅವರ ಶಕ್ತಿ ಉತ್ಸಾಹವನ್ನು ಕರ್ಮ

ಕ್ಷಮತೆಯನ್ನು ಕಂಡು ಜನರು ಆಶ್ಚರ್ಯಪಡುತ್ತಾರೆ. ನೀನು ಸರಿಯಾದ ರೀತಿಯಲ್ಲಿ ಹೇಗೆ ಕೆಲಸ ಮಾಡಬೇಕೆಂಬುದನ್ನು ಅವರಿಂದ ಕಲಿಯಬೇಕು. ನನ್ನ ಆದೇಶದ ಮೇರೆಗೆ ಅವನು ತನ್ನ ಜಪ-ಧ್ಯಾನವನ್ನು ಕಡೆಗಣಿಸಿ ಹೇಗೆ ಕರ್ಮಕ್ಷೇತ್ರಕ್ಕೆ ಧುಮುಕಿದ್ದಾನೆ ನೋಡು. ಇದೇನು ಸಾಮಾನ್ಯವಾದ ತ್ಯಾಗವೆ? ಮಾನವತೆಗೆ ಒಳಿತನ್ನುಂಟುಮಾಡುವುದು ನಮ್ಮ ಧ್ಯೇಯ. ನಾನು ಅವನ ಸೇವಾಕಾರ್ಯಗಳಿಂದ ಅತ್ಯಂತ ಸಂಪ್ರೀತನಾಗಿದ್ದೇನೆ. ಅವನಿಗೆ ನನ್ನ ಪ್ರೇಮಪೂರ್ಣ ಆಶೀರ್ವಾದಗಳನ್ನು ತಿಳಿಸು'' ಎಂದು ಹೇಳಿ ಸ್ವಾಮಿ ತ್ರಿಗುಣಾತೀತಾನಂದರನ್ನು ಅಪಾರವಾಗಿ ಕೊಂಡಾಡಿದರು.

ಸ್ವಾಮಿ ತ್ರಿಗುಣಾತೀತಾನಂದರು ನಿರಂತರವಾಗಿ ೪ ವರ್ಷಗಳ ಕಾಲ 'ಉದ್ಬೋಧನ' ಪತ್ರಿಕೆಯ ಕರ್ಣಧಾರತ್ವವನ್ನು ವಹಿಸಿ, ಪತ್ರಿಕೆಗೆ ವ್ಯವಸ್ಥಿತ ರೂಪು ನೀಡಿದರು. ತಮ್ಮ ಆಧ್ಯಾತ್ಮಿಕ ಸಾಧನೆಯನ್ನೂ ಕಡೆಗಣಿಸಿ, ಪ್ರತಿನಿತ್ಯ ಕೆಲಸ ಪ್ರಾರಂಭಿಸುವ ಮುನ್ನ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಪೂಜಿಸಿ ನಮಸ್ಕರಿಸಿದರೆ ಅವರಿಗೆ ಸ್ವಲ್ಪವೂ ದಣಿವಾಗುತ್ತಿರಲಿಲ್ಲ. ಹೀಗೆ ಅವರು ತಮ್ಮ ಕೆಲಸಕಾರ್ಯಗಳನ್ನೇ ತಪಸ್ಸನ್ನಾಗಿಸಿಕೊಂಡಿದ್ದರು. ಸ್ವಾಮೀಜಿ ಹೇಳಿದಂತೆ, ''ಕೇವಲ ನಿಸ್ವಾರ್ಥಿ ಸಂನ್ಯಾಸಿಗಳಿಂದ ಮಾತ್ರ ಈ ಬಗೆಯ ಸಾಹಸಕಾರ್ಯ ಸಾಧ್ಯ!'' ಎಂಬುದು ಧ್ಯಾನಯೋಗ್ಯವಾದ ಮಾತು.

ಸ್ವಾಮಿ ವಿವೇಕಾನಂದರು ಇದೇ ರೀತಿಯಲ್ಲಿ ಭಾರತದ ಪ್ರಾದೇಶಿಕ ಭಾಷೆಗಳಲ್ಲೂ ಪತ್ರಿಕೆಗಳನ್ನು ಹೊರಡಿಸುವಂತೆ ತಮ್ಮ ಶಿಷ್ಯರಿಗೆ ಕರೆ ನೀಡಿದರು. ಅವರ ಜೀವಿತಾವಧಿಯಲ್ಲಿ ಈ ಮಹತ್ಕಾರ್ಯ ನಡೆಯದಿದ್ದರೂ ಹಲವು ದಶಕಗಳ ನಂತರ ರಾಮಕೃಷ್ಣ ಮಹಾಸಂಘವು ದೇಶ-ವಿದೇಶಗಳಲ್ಲಿ ಅತ್ಯಂತ ಸಮರ್ಪಕವಾದ ರೀತಿಯಲ್ಲಿ ಕಾರ್ಯನಿರತವಾಗಿದೆ.

'ಪ್ರಬುದ್ಧ ಭಾರತ', 'ವೇದಾಂತ ಕೇಸರಿ' ಭಾರತದಲ್ಲಿ ಪ್ರಕಟಣೆಯಾಗುತ್ತಿರುವ ಆಂಗ್ಲ ಪತ್ರಿಕೆಗಳಾದರೆ, 'ವೇದಾಂತ', 'ಗ್ಲೋಬಲ್ ವೇದಾಂತ', 'ನಿರ್ವಾಣ' ಹಾಗೂ 'ಜ್ಯೋತಿ' ವಿದೇಶಗಳಲ್ಲಿ ಪ್ರಕಟವಾಗುತ್ತಿರುವ ಆಂಗ್ಲ ಪತ್ರಿಕೆಗಳು. 'ವಿವೇಕ ಜ್ಯೋತಿ' ಹಿಂದಿಯಲ್ಲಿ, 'ಉದ್ಬೋಧನ' ಮತ್ತು 'ಸಮಾಜ ಶಿಕ್ಷಾ' ಬಂಗಾಳಿಯಲ್ಲಿ, 'ರಾಮಕೃಷ್ಣ ಜ್ಯೋತ್' ಗುಜರಾತಿಯಲ್ಲಿ, 'ಜೀವನ ವಿಕಾಸ' ಮರಾಠಿಯಲ್ಲಿ, 'ವಿವೇಕಪ್ರಭ' ಕನ್ನಡದಲ್ಲಿ, 'ಪ್ರಬುದ್ಧ ಕೇರಳಂ' ಮಲಯಾಳಂನಲ್ಲಿ, 'ರಾಮಕೃಷ್ಣ ವಿಜಯಂ' ತಮಿಳಿನಲ್ಲಿ, 'ರಾಮಕೃಷ್ಣಪ್ರಭ' ತೆಲುಗಿನಲ್ಲಿ ಪ್ರಕಟಗೊಳ್ಳುತ್ತಿವೆ.

'ವೇದಾಂತ' ಫ್ರೆಂಚ್ ಭಾಷೆಯಲ್ಲಿ, 'ವೇದಾಂತ' ಡಚ್ ಭಾಷೆಯಲ್ಲಿ ಹಾಗೆಯೇ 'Femestee No Kotoba' ಜಪಾನಿ ಭಾಷೆಯಲ್ಲಿ ಪ್ರಕಟವಾಗುತ್ತಿರುವ ವಿದೇಶೀ ಭಾಷೆಯ ಪತ್ರಿಕೆಗಳು. ಶ್ರೀಶಾರದಾ ಮಠ ಮತ್ತು ಮಿಷನ್ ವತಿಯಿಂದ 'ಸಂವಿತ್' ಪತ್ರಿಕೆಯು ಆಂಗ್ಲಭಾಷೆಯಲ್ಲಿ ಪ್ರಕಟವಾಗುತ್ತಿವೆ. ಅಲ್ಲದೇ ನಮ್ಮ ಪ್ರಾದೇಶಿಕ ಭಾಷೆಗಳಲ್ಲಿ ರಾಮಕೃಷ್ಣ- ವಿವೇಕಾನಂದ ಭಾವಪರಿಷತ್ ವತಿಯಿಂದ ಹಲವಾರು ಪತ್ರಿಕೆಗಳು ಪ್ರಕಟವಾಗುತ್ತ ಜನಮನಗಳನ್ನು ತಲುಪುವುದರಲ್ಲಿ ಯಶಸ್ವಿಯಾಗಿವೆ. ನಮ್ಮ ಭಾರತದಲ್ಲಿ ಹಲವಾರು ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಗಳೂ ಅನೇಕ ಪತ್ರಿಕೆಗಳ ಮೂಲಕ ಉನ್ನತವಾದ ಚಿಂತನೆಗಳನ್ನು ಜನಸಮೂಹಕ್ಕೆ ತಲುಪಿಸುವ ಕಾರ್ಯದಲ್ಲಿ ನಿರತವಾಗಿವೆ.

ನಮ್ಮ ಋಷಿ-ಮುನಿಗಳು, ಮಹಾಕಾವ್ಯಗಳಾದ ರಾಮಾಯಣ ಮಹಾಭಾರತದಲ್ಲಿ ಬರುವ ನೈತಿಕ ಮೌಲ್ಯಗಳು, ಸಂತರ ಜೀವನ-ಉಪದೇಶಗಳು, ದಿವ್ಯತ್ರಯರ ಚಿಂತನೆಗಳು, ರಾಮಕೃಷ್ಣ ಮಹಾಸಂಘದ ಇತಿಹಾಸ ಹಾಗೂ ಹಿರಿಯ ಯತಿಗಳ ದಿವ್ಯಸ್ಮೃತಿಗಳು, ಯುವಕರಿಗೆ ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ, ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಮಾಹಿತಿಗಳು, ನೀತಿಕಥೆಗಳು, ಕೌಟುಂಬಿಕ-ಸಾಂಸ್ಕೃತಿಕ ಮೌಲ್ಯಗಳು, ತೀರ್ಥಕ್ಷೇತ್ರಗಳ ಪ್ರವಾಸ ಕಥನ... ಹೀಗೆ ಹಲವಾರು ವಿಷಯಗಳು ಕುರಿತು ಸರ್ವರಿಗೂ ಮನಮುಟ್ಟುವ ರೀತಿಯಲ್ಲಿ ಪತ್ರಿಕೆಗಳು ಮುನ್ನಡೆಸಿಕೊಂಡು ಬರುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ಇಂತಹ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಷಯಗಳ ಅಧ್ಯಯನ ಹಾಗೂ ಚಿಂತನ-ಮಂಥನ ಮೂಲಕ, ನಮ್ಮ ವ್ಯಕ್ತಿತ್ವ

## ಪತ್ರಿಕೆಯ ಬಗ್ಗೆ ಸ್ವಾಮೀಜಿ

''ಪತ್ರಿಕೆ ಬರಿಯ ಕ್ಷಣಕಾಲದ ಸ್ಫೂರ್ತಿಯಾಗಿರಕೂಡದು, ಅದು ಶಾಂತವಾಗಿ ಸ್ಥಿರವಾಗಿ ಮುಂದುವರಿಯಬೇಕು, ಉತ್ತಮ ವಿಷಯಗಳನ್ನು ಒಳಗೊಂಡಿರಬೇಕು. ಕೆಲವು ಜನ ಚೆನ್ನಾಗಿ ಸ್ಥಿರವಾಗಿ ಬರೆಯಬಲ್ಲವರನ್ನು ಕರೆದುಕೊಳ್ಳಿ. ಸಂಪೂರ್ಣ ನಿಸ್ವಾರ್ಥರಾಗಿ, ದೃಢಚಿತ್ತರಾಗಿ ಕೆಲಸ ಮಾಡಿ. ನಾವು ಮಹಾಕಾರ್ಯವನ್ನು ಸಾಧಿಸುತ್ತೇವೆ.''

*(ಸ್ವಾಮೀಜಿ ತಮ್ಮ ಶಿಷ್ಯ ಆಳಸಿಂಗ ಪೆರುಮಾಳ್‌ಗೆ ಬರೆದ ಪತ್ರದಿಂದ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು. ೨೮೮)*

''ಈ ಪತ್ರಿಕೆ ಸದ್ಯಕ್ಕೆ ನಿನ್ನ ಇಷ್ಟದೇವರಾಗಲಿ. ನೀನು ಜಯಶಾಲಿಯಾಗುವೆ.

''ನೀನು ಈ ಪತ್ರಿಕೆಯಲ್ಲಿ ಯಶಸ್ವಿಯಾದ ಮೇಲೆ ಇದರ ಮೇಲ್ಪಂಕ್ತಿಯನ್ನೇ ಅನುಸರಿಸಿ ತಮಿಳು, ತೆಲುಗು, ಕನ್ನಡ ಮುಂತಾದ ದೇಶೀಯ ಭಾಷೆಗಳಲ್ಲಿಯೂ ಪತ್ರಿಕೆಗಳನ್ನು ಆರಂಭಿಸು. ಜನಸಾಮಾನ್ಯರಿಗೆ ಭಾವನೆಗಳು ತಲುಪಬೇಕು.''

*(ಡಾಕ್ಟರ್ ನಂಜುಂಡರಾವ್ ಅವರಿಗೆ ಬರೆದ ಪತ್ರದಿಂದ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೪, ಪು. ೪೪೩-೪೪)*